# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 6 (96)
ಸದಸ್ಯರ ಹೆಸರು : ಶ್ರೀ. ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
ಉತ್ತರಿಸಬೇಕಾದ ದಿನಾಂಕ : 27.01.2026

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರ್ ನಲ್ಲಿ ತೆಂಗು ಬೆಳೆಯಲಾಗುತ್ತಿದೆ; (ತಾಲ್ಲೂಕುವಾರು ವಿವರ ನೀಡುವುದು); | ತುಮಕೂರು ಜಿಲ್ಲೆಯಲ್ಲಿ 1.79 ಲಕ್ಷ ಹೆಕ್ಟೇರ್ ನಲ್ಲಿ ತೆಂಗು ಬೆಳೆಯಲಾಗುತ್ತಿದೆ; ತಾಲ್ಲೂಕುವಾರು ವಿವರ ಕೆಳಗಿನಂತಿದೆ In Tumakuru district, coconut is cultivated on area of 1.79 lakh hectares. Taluk-wise details are given below. |

| ಕ್ರ. ಸಂ. | ತಾಲ್ಲೂಕು | ತೆಂಗು ಬೆಳೆ ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|
| 1. | ಚಿಕ್ಕನಾಯಕನಹಳ್ಳಿ Chikkanayakanahalli | 33410 |
| 2. | ಗುಬ್ಬಿ Gubbi | 34231 |
| 3. | ಕೊರಟಗೆರೆ Koratagere | 1779 |
| 4. | ಕುಣಿಗಲ್ Kunigal | 12453 |
| 5. | ಮಧುಗಿರಿ Madhugiri | 1088 |
| 6. | ಪಾವಗಡ Pavagada | 588 |
| 7. | ಶಿರಾ sira | 9644 |
| 8. | ತಿಪಟೂರು Tiptur | 33073 |
| 9. | ತುಮಕೂರು Tumkur | 12728 |
| 10. | ತುರುವೇಕೆರೆ Turuvekere | 40976 |
| | ಒಟ್ಟು | 1,79,970 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ತುಮಕೂರು ಜಿಲ್ಲೆಯಲ್ಲಿ ತೆಂಗಿನ ಮರಗಳು ಕೆಂಪುಮೂತಿಹುಳ ಮತ್ತು ಅಣಬೆ ರೋಗಕ್ಕೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೋಗ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಗಮನಕ್ಕೆ ಬಂದಿದೆ,<br><br>ತುಮಕೂರು ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ 8,817 ಹೆಕ್ಟೇರ್ ಪ್ರದೇಶದಲ್ಲಿ ಕೆಂಪುಮೂತಿಹುಳ ಮತ್ತು 22,071 ಹೆಕ್ಟೇರ್ ಪ್ರದೇಶದಲ್ಲಿ ಅಣಬೆ ರೋಗಕ್ಕೆ ತುತ್ತಾಗಿರುವುದಾಗಿ ಅಂದಾಜಿಸಲಾಗಿದೆ. ಇವುಗಳ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳು ಕೆಳಗಿನಂತಿದೆ.<br>1. ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆಯಿಂದ ತೆಂಗಿನ ಮರಗಳು ಸದೃಡಗೊಂಡು ರೋಗ/ ಕೀಟ ನಿರೊಧಕ ಶಕ್ತಿ ಬೆಳಸಿಕೊಳ್ಳುತ್ತವೆ ಅದುದರಿಂದ ಈ ಚಟುವಟಿಕೆಗಳಿಗಾಗಿ ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್ ವರೆಗೆ ರೂ. 54,000/- ಗಳನ್ನು ಎರಡು ವರ್ಷದ ಅವಧಿಗೆ ಸಹಾಯಧನ ನೀಡಲಾಗುತ್ತಿದೆ. ಮೊದಲನೇ ವರ್ಷ ರೂ.45,250/- ಗಳನ್ನು ಹಾಗೂ ಎರಡನೇ ವರ್ಷದ ನಿರ್ವಹಣೆಗೆ |

| | | |
|---|---|---|
| | | ರೂ.8,750/ ಗಳ ಸಹಾಯಧನವನ್ನು ನೀಡಲಾಗುತ್ತಿದೆ. ಮೊದಲನೇ ವರ್ಷದಲ್ಲಿ ರೋಗ/ಕೀಟ ಬಾಧಿತ, ಒಣಗಿದ ಮರ ತೆಗೆಯಲು, ಹೊಸ ತೆಂಗಿನ ಗಿಡ ನೆಡಲು, ನಿರ್ವಹಣೆಗಾಗಿ ಪೋಷಕಾಂಶಗಳು, ಬೇವಿನ ಹಿಂಡಿ, ಹಸಿರೆಲೆ ಗೊಬ್ಬರದ ಬೀಜಗಳು, ಸಸ್ಯಸಂರಕ್ಷಣ ಔಷಧಿಗಳನ್ನು ನೀಡಲು 4571 ರೈತರಿಗೆ 2423 ಹೆಕ್ಟೇರ್ ಪ್ರದೇಶಕ್ಕಾಗಿ ರೂ.951 ಲಕ್ಷಗಳ ಸಹಾಯಧನ ನೀಡಲಾಗಿದೆ. ತುಮಕೂರು ಜಿಲ್ಲೆಯಲ್ಲಿ 1084 ರೈತರಿಗೆ 591 ಹೆಕ್ಟೇರ್ ಪ್ರದೇಶದಲ್ಲಿ ರೂ. 187.17 ಲಕ್ಷಗಳ ಸಹಾಯಧನ ನೀಡಲಾಗಿದೆ. ಈ ಪ್ರದೇಶದ ಎರಡನೇ ವರ್ಷದ ನಿರ್ವಹಣೆಗಾಗಿ ರೂ.186.04 ಲಕ್ಷಗಳನ್ನು ವಿನಿಯೋಗಿಸಲಾಗಿದೆ.<br><br>2. ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆಗಾಗಿ ಒಂದು ಹೆಕ್ಟೇರ್ ಗೆ ರೂ. 35,000/- ಗಳಂತೆ 2 ವರ್ಷಗಳ ಅವಧಿಗೆ, ಮೊದಲನೇ ವರ್ಷ ರೂ.17500/- ಗಳು ಮತ್ತು ಎರಡನೇ ವರ್ಷದಲ್ಲಿ ರೂ.17500/- ಗಳಂತೆ ಸಹಾಯಧನ ನೀಡಲಾಗುತ್ತಿದೆ. ರೋಗ ಮತ್ತು ಕೀಟಬಾಧಿತ ತಾಕುಗಳನ್ನು ಗುಚ್ಛಗಳಲ್ಲಿ (Clusters) ಆಯ್ಕೆ ಮಾಡಿ ಸಹಾಯಧನ ನೀಡಲಾಗಿರುತ್ತದೆ. ಮೊದಲನೇ ವರ್ಷದ ಕಾರ್ಯಕ್ರಮದಡಿ 41185 ರೈತರಿಗೆ 28420 ಹೆಕ್ಟೇರ್ ಪ್ರದೇಶದಲ್ಲಿ ರೂ. 5000 ಲಕ್ಷಗಳ ಸಹಾಯಧನ ಒದಗಿಸಲಾಗಿದೆ. ತುಮಕೂರು ಜಿಲ್ಲೆಯಲ್ಲಿ 15338 ರೈತರಿಗೆ 9840 ಹೆಕ್ಟೇರ್ ಪ್ರದೇಶದಲ್ಲಿ ರೂ. 1829.87 ಲಕ್ಷಗಳ ಸಹಾಯಧನ ನೀಡಲಾಗಿದೆ. ಈ ಪ್ರದೇಶದ ಎರಡನೇ ವರ್ಷದ ನಿರ್ವಹಣೆಗಾಗಿ ರೂ.4973.45 ಲಕ್ಷಗಳ ಅನುದಾನ ವಿನಿಯೋಗಿಸಲಾಗಿದೆ. ತುಮಕೂರು ಜಿಲ್ಲೆಯಲ್ಲಿ 12312 ರೈತರಿಗೆ 8362 ಹೆಕ್ಟೇರ್ ಪ್ರದೇಶದಲ್ಲಿ ರೂ. 1385 ಲಕ್ಷಗಳ ಸಹಾಯಧನ ನೀಡಲಾಗಿದೆ.<br>3. ತೆಂಗು ಬೆಳೆಯಲ್ಲಿ ಕಂಡು ಬರುವ ಕಪ್ಪುತಲೆಹುಳು ಹಾಗೂ ಬಿಳಿನೊಣ ಕೀಟಗಳ ನಿಯಂತ್ರಣಕ್ಕಾಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 23 ಪ್ರಯೋಗ ಶಾಲೆಗಳಲ್ಲಿ ಗೋನಿಯೋಜಸ್ ಎಂಬ ಪರೋಪಜೀವಿಗಳು ಹಾಗೂ ಐಸಿರಿಯಾ ಜೈವಿಕ ಕೀಟನಾಶಕವನ್ನು ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 140.00 ಲಕ್ಷಗಳ ಅನುದಾನ ನಿಗದಿಯಾಗಿದ್ದು, ತುಮಕೂರು ಜಿಲ್ಲೆಗೆ 21.00 ಲಕ್ಷಗಳನ್ನು ನೀಡಲಾಗಿದೆ.<br>4. ತೆಂಗು ಸೇರಿದಂತೆ ವಿವಿಧ ತೋಟಗಾರಿಕಾ ಬೆಳೆಗಳಿಗೆ ಸಸ್ಯ ಸಂರಕ್ಷಣಾ ಔಷಧಿಗಳಿಗೆ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಪ್ರತಿ ಹೆಕ್ಟೇರಿಗೆ ತಗಲುವ ರೂ. 10000/- ಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಂತೆ ರೂ.9000/- ಗಳ ಸಹಾಯಧನ ಹಾಗೂ ಸಾಮಾನ್ಯ ವರ್ಗದ ರೈತರಿಗೆ ಶೇ.75ರಂತೆ ರೂ.7500ಗಳ ಸಹಾಯಧನ ನೀಡಲಾಗುತ್ತಿದೆ. |

| | | |
|---|---|---|
| | | 5. ತೆಂಗು ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರೂ.5000/- ಗಳಲ್ಲಿ ಪ್ರತಿ ಹೆಕ್ಟೇರ್ ಗೆ ತಗಲುವ ವೆಚ್ಚದ ಶೇ.30ರಂತೆ ಪ್ರತಿ ಹೆಕ್ಟೇರಿಗೆ ರೂ.1500 ದರದಲ್ಲಿ 2ಹೆಕ್ಟೇರ್ ರವರೆಗೆ ರೂ.3000/-ಗಳ ಸಹಾಯಧನ ನೀಡಲಾಗುತ್ತಿದೆ.<br>6. ದಿನಾಂಕ: 31.07.2025 ಹಾಗೂ 01.08.2025 ರಂದು ತಜ್ಞರು, Central Plantation Crops Research Institute (CPCRI) ಕಾಸರಗೋಡು, ತೋಟಗಾರಿಕೆ ವಿಶ್ವ ವಿದ್ಯಾನಿಲಯ ತಜ್ಞರು, CDB ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳಿಂದ ತೆಂಗು ಬೆಳೆಯಲ್ಲಿ ಕಂಡು ಬರುವ ರೋಗ / ಕೀಟಗಳಿಗೆ ಹಾನಿಗೊಳಗಾದ ತುಮಕೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ರೈತರ ತಾಕುಗಳಲ್ಲಿ 12 ಪ್ರಾತ್ಯಕ್ಷತೆ / 85 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು 12500 ರೈತರಿಗೆ ಅರಿವು ಮೂಡಿಸಲಾಗುತ್ತಿದೆ.<br>7. ಕೇಂದ್ರ ಸರ್ಕಾರದ ವತಿಯಿಂದ ರಚಿಸಿರುವ ವೈಜ್ಞಾನಿಕ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:11.11.2025 ರಂದು ನಿರ್ದೇಶಕರು, CPCRI, ಕಾಸರಗೋಡು ಇವರ ಅಧ್ಯಕ್ಷತೆಯಲ್ಲಿ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಇಲಾಖಾ ಅನುಷ್ಠಾನಾಧಿಕಾರಿಗಳೊಂದಿಗೆ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಕಪ್ಪುತಲೆ ಹುಳುವಿನ ನಿಯಂತ್ರಣಕ್ಕೆ ತಾಕುಗಳ ನೈರ್ಮಲ್ಯಗೊಳಿಸುವುದು, ಬಾಧಿತ ಮರದ ಎಲೆ, ಕಾಂಡ ಕತ್ತರಿಸಿ ನಾಶಪಡಿಸುವುದು, ಪರೋಪ ಜೀವಿಗಳ ಉತ್ಪಾದನೆ ಮಾಡಿ ವಿತರಿಸುವುದು, ಪರೋಪ ಜೀವಿಗಳ ಉತ್ಪಾದನೆಗೆ ಪ್ರಯೋಗಶಾಲೆಗಳ ನಿರ್ಮಾಣ ಹಾಗೂ ಉನ್ನತಿಕರಣಗೊಳಿಸುವುದು. ಬಿಳಿನೊಣ ಬಾಧೆಯ ನಿಯಂತ್ರಣಕ್ಕೆ ಬೇವಿನ ಎಣ್ಣೆ, ಐಸೇರಿಯಾ ಜೈವಿಕ ಶಿಲೀಂದ್ರ ಕೀಟನಾಶಕ/ಸಿಂಪ್ಲಿಸಿಲಿಯಂ ಯನ್ನು ಸಿಂಪಡಿಸುವುದು, ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆಗಾಗಿ ಬೇವಿನಹಿಂಡಿ, ಜೈವಿಕ ಗೊಬ್ಬರಗಳು, ಟ್ರೈಕೊಡರ್ಮಾ, ಮಣ್ಣು ಸುಧಾರಕಗಳು ಹಾಗೂ ಪೋಟ್ಯಾಶ್ ಗೊಬ್ಬರವನ್ನು ನೀಡಲು, ಈ ಕೀಟಗಳ ನಿಯಂತ್ರಣಕ್ಕೆ CPCRI (ಕೇಂದ್ರ ತೋಟದ ಬೆಳೆಗಳ ಸಂಶೋಧನಾ ಕೇಂದ್ರ), ಕಾಸರಗೋಡು ಹಾಗೂ NBAIR (ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ), ಬೆಂಗಳೂರು ಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳುವುದು, ಸೇರಿದಂತೆ ಸಮಗ್ರ ಕೀಟ/ಪೋಷಕಾಂಶಗಳ ನಿರ್ವಹಣೆಗೆ ತುಮಕೂರು ಜಿಲ್ಲೆ ಸೇರಿದಂತೆ ಪ್ರಮುಖ ತೆಂಗು ಬೆಳೆಯುವ ಜಿಲ್ಲೆಗಳಿಗೆ ರೂ. 791.05 ಕೋಟಿಗಳ ಪ್ರಸ್ತಾವನೆಯನ್ನು ಅನುಮೋದನೆಗಾಗಿ CPCRI, ಕಾಸರಗೋಡು ರವರ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. |

It has come to the notice,

In Tumakuru district, 8,817 hectares of coconut trees are affected by red palm weevil, and 22,071 hectares by coconut root wilt disease. The measures taken for controlling these issues are as follows:

1. Through rejuvenation, replanting, and maintenance, coconut trees strengthen and develop resistance to diseases and pests. To assist these activities, a subsidy of Rs. 54,000/- per hectare is being provided for a two-year period to each beneficiary. For first year Rs. 45,250/- and Rs. 8,750/- for the second year's maintenance. In the first year, financial assistance has been provided to 4,571 farmers for 2,423 hectares, amounting to Rs. 951 Lakhs. In Tumakuru district, assistance of Rs. 187 Lakhs has been provided to 1,084 farmers for 591 hectares. Second Year Maintenance. For the second year of maintenance, an amount of Rs. 186 Lakhs has been allocated for this area.
2. A subsidy of Rs. 35,000/- per hectare is provided for a two-year period to assist in demonstrations and maintenance. In the first year, Rs. 17,500/- is provided and in the second year Rs. 17,500/- is provided. Pest- and disease-affected areas are selected in clusters for assistance. In the first year, Rs. 5000 lakhs has been provided for 28,420 hectares benefiting 41,185 farmers. In Tumakuru district, Rs. 1829.87 lakhs has been given for 9,840 hectares benefiting 15,338 farmers. For the second year of maintenance, Rs. 4973.45 lakhs have been utilized. In Tumakuru district, Rs. 1385 lakhs for 8,362 hectares benefiting 12,312 farmers has been given.
3. In order to control Black Headed Caterpiller and Rugose Whitefly pests, 23 experimental stations are operational in the Department. Goniogus Parasites and Isiria biological pesticide are being produced and distributed free of cost. A total budget of Rs. 1.4 crores has been allocated this year, of which Rs. 21 lakhs have been allocated to Tumakuru district.
4. Under the Integrated Pest and Disease Management scheme for horticultural crops, including coconut, farmers from the Scheduled Castes/Scheduled Tribes receive a subsidy of Rs.

| | | |
|---|---|---|
| | | 9,000/- per hectare (90%) for the cost of plan protection chemicals (Rs. 10,000/- per hectare) while farmers from other categories receive Rs 7,500/- (75%).<br><br>5. Under the National Horticulture Missior scheme, out of vthe total cost of Rs. 5000 pei hectare a subsidy of 30% i.e. Rs. 1,500/- per hectare is provided for the management of diseases, pests, and nutrient deficiencies in coconut and other horticultural crops. A subsidy of Rs. 3,000/- is provided for up to 2 hectares per farmer.<br>6. On July 31, 2025, and August 1, 2025, experts from Central Plantation Crops Research Institute (CPCRI), Kasaragod, Horticulture University specialists, CDB officers, and Department officials conducted a field visit to Tumakuru and Hassan districts. They organized 12 demonstrations and 85 training programs, reaching out to 12,500 farmers to create awareness about coconut diseases and pests.<br>7. A Scientific Committee has been formed by the Central Government chaired by the Director of CPCRI, Kasaragod. In the presence of the Director of the Horticulture Department and other officials, the committee discussed measures on 11.11.2025 regarding improving sanitation in coconut gardens, pruning infected trees, and distributing beneficial organisms. The committee also discussed the construction and upgrading of experimental stations for the production of these pests. For controlling whitefly, use of neem oil and Isiria biological pesticide was suggested including research on comprehensive pest and disease management to conducted at CPCRI, Kasaragod, and NBAIR (National Bureau of Agricultural Insect Resources), Bangalore. A proposal for comprehensive pest and nutrient management, amounting to Rs. 791.05 crores has been submitted to the Central Government for approval through CPCRI, Kasaragod. |
| ಇ) | ರೋಗ ಲಕ್ಷಣ ಮತ್ತು ರೋಗಕ್ಕೆ ಔಷದೋಪಚಾರಕ್ಕಾಗಿ ರೈತರಿಗೆ ಸೂಕ್ತ ಮಾಹಿತಿ ನೀಡಲು ಐ.ಇ.ಸಿ. ಚಟುವಟಿಕೆಗಾಗಿ ಇಲಾಖೆಯು ಕೈಗೊಂಡಿರುವ ಕ್ರಮಗಳೇನು; | ರೋಗ ಲಕ್ಷಣ ಮತ್ತು ರೋಗಕ್ಕೆ ಔಷದೋಪಚಾರಕ್ಕಾಗಿ ರೈತರಿಗೆ ಮಾಹಿತಿ, ಶಿಕ್ಷಣ ಮತ್ತು ಸಂಹವನ ಚಟುವಟಿಕೆಗಾಗಿ (ಐ.ಇ.ಸಿ) ಇಲಾಖೆಯು ಕೈಗೊಂಡಿರುವ ಕ್ರಮಗಳನ್ನು ಮೇಲಿನ ಉತ್ತರ (ಆ) ರಲ್ಲಿ ವಿವರಿಸಲಾಗಿದೆ. |

| | | |
|---|---|---|
| | | The actions taken by the Department to provide information, education and communication (IEC) activities to farmers regarding disease symptoms and management are detailed in the above reply at(ಆ). |
| ಈ) | ಕೆಂಪುಮೂತಿಹುಳ ಮತ್ತು ಅಣಬೆ ರೋಗಕ್ಕೆ ತುತ್ತಾಗಿ ಮರ ಮತ್ತು ಬೆಳೆ ನಷ್ಟವಾದರೆ ರೈತರಿಗೆ ಪ್ರತಿ ಮರಕ್ಕೆ ನೀಡುವ ಪರಿಹಾರದ ಮೊತ್ತವೆಷ್ಟು; ಕಳೆದ ಮೂರು ವರ್ಷದಿಂದ ಸದರಿ ರೋಗಕ್ಕೆ ಬಲಿಯಾದ ಮರಗಳ ಸಂಖ್ಯೆ ಎಷ್ಟು; ರೈತರಿಗೆ ನೀಡಿದ ಪರಿಹಾರವೆಷ್ಟು? (ತಾಲ್ಲೂಕುವಾರು ವರ್ಷವಾರು ವಿವರ ನೀಡುವುದು). | ಬೆಳೆ ನಷ್ಟವಾದ ರೈತರಿಗೆ ಪರಿಹಾರ ನೀಡುವ ಕಾರ್ಯಕ್ರಮ ತೋಟಗಾರಿಕೆ ಇಲಾಖೆಯಲ್ಲಿ ಇರುವುದಿಲ್ಲ. ಕೆಂಪುಮೂತಿ ಹುಳುವಿನಿಂದ 2023-24, 2024-25, 2025-26 ರಲ್ಲಿ 10.56 ಲಕ್ಷ ತೆಂಗಿನ ಮರಗಳು ಮತ್ತು ಅಣಬೆ ರೋಗದಿಂದ 26.48 ಲಕ್ಷ ತೆಂಗಿನ ಮರಗಳು ಬಾಧಿತವಾಗಿರುವುದಾಗಿ ಅಂದಾಜಿಸಲಾಗಿದೆ. ಮೂರು ವರ್ಷದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>There is no program in the Horticulture Department for providing compensation to farmers at time of crop loss. It is estimated that 10.56 lakh coconut trees have been affected by red palm weevil in the years 2023-24, 2024-25 and 2025-26, and 26.48 lakh coconut trees affected by coconut root wilt disease. Detailed information for the three years is provided in the annexure. |

HORTI 28 HGM 2026

(ಎಸ್.ಎಸ್.ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು

ಅನುಬಂಧ LCQ 6 (96)

## ಕೆಂಪುಮೂತಿಹುಳ ಮತ್ತು ಅಣಬೆ ರೋಗದಿಂದ ಬಾಧಿತ ತೆಂಗಿನ ಮರಗಳ ಸಂಖ್ಯೆ

| ಕ್ರ. ಸಂ. | ತಾಲ್ಲೂಕು | ಕೆಂಪುಮೂತಿಹುಳ ಬಾಧಿತ ಮರಗಳ ಸಂಖ್ಯೆ | | | ಅಣಬೆ ರೋಗದಿಂದ ಬಾಧಿತ ಮರಗಳ ಸಂಖ್ಯೆ | | |
|---|---|---|---|---|---|---|---|
| | | 2023-24 | 2024-25 | 2025-26 | 2023-24 | 2024-25 | 2025-26 |
| 1. | ತುಮಕೂರು | 3500 | 55000 | 72000 | 22500 | 31300 | 39300 |
| 2. | ಕುಣಿಗಲ್ | 7520 | 15680 | 25650 | 18500 | 29500 | 36400 |
| 3. | ತುರುವೇಕೆರೆ | 187500 | 212500 | 262500 | 325000 | 350000 | 400000 |
| 4. | ತಿಪಟೂರು | 23100 | 30100 | 38300 | 277000 | 369000 | 461000 |
| 5. | ಚಿಕ್ಕನಾಯಕನಹಳ್ಳಿ | 6150 | 11070 | 12054 | 31980 | 43050 | 44526 |
| 6. | ಗುಬ್ಬಿ | 24300 | 27000 | 30000 | 45360 | 50400 | 56000 |
| 7. | ಶಿರಾ | 2650 | 4265 | 6100 | 4125 | 6450 | 7120 |
| 8. | ಕೊರಟಗೆರೆ | 10 | 15 | 20 | 15 | 20 | 25 |
| | ಒಟ್ಟು | 254730 | 355630 | 446624 | 724480 | 879720 | 1044371 |